# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ಓ.ಎಸ್. ಸಂಖ್ಯೆ.2918/2022** ಡಿ.ಡಬ್ಲೂ .1

ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

1. ದಾನ ಪತ್ರ ಆಗಿರುವ ವಿಚಾರ ನನಗೆ ಸುಮಾರು 25-30 ವರ್ಷಗಳಿಂದ ಗೊತ್ತು. ಸದರಿ ದಾನ ಪತ್ರವನ್ನು ನ್ಯಾಯಾಲಯಗಳಲ್ಲಿ ಮತ್ತು ಕಂದಾಯ ಇಲಾಖೆಯಲ್ಲಿ ಅದರ ನಕಲನ್ನು ನೀಡಿದ್ದೇನೆ. ಎಲ್ಲಿಯೂ ಸಹ ಅಸಲು ಪ್ರತಿಯನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಅದರ ಅಸಲು ಪ್ರತಿ ಸಿಗದ ಕಾರಣ ನಕಲು ಪ್ರತಿಯನ್ನು ಹಾಜರು ಮಾಡಿದ್ದೇನೆ. ಸದರಿ ದಾನ ಪತರದ ಅಸಲು ಪ್ರತಿ ಏನು ಆಗಿರುತ್ತದೆ ಎಂದು ಗೊತ್ತಿಲ್ಲ. ಅದರ ಅಸಲು ಪ್ರತಿಯ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುತ್ತೀರಾ ಎಂದರೆ ಇಲ್ಲ.

2. ದಾನ ಪತ್ರವನ್ನು ನನ್ನ ಅಜ್ಜಿ ದೊಡ್ಡನಂಜಮ್ಮ ರವರು 1974 ನೇ ಸಾಲಿನಲ್ಲಿ ಬರೆದುಕೊಟ್ಟಿರುತ್ತಾರೆ. ದೊಡ್ಡನಂಜಮ್ಮ ನನ್ನ ಅಜ್ಜಿ ಎಂದು ತೋರಿಸಲು ವಿಭಾಗ ಪತ್ರ, ದಾನ ಪತ್ರ, ವಂಕ್ಷವೃಕ್ಷ ಮತ್ತು ಇತರೆ ದಾಖಲೆ ಹಾಜರು ಮಾಡಿದ್ದೇನೆ. ವಂಕ್ಷವೃಕ್ಷ ವನ್ನು ನನ್ನ ಹೇಳಿಕೆಯ ಮೇರೆಗೆ ತಯಾರು ಮಾಡಿದೆ ಎಂದರೆ ಹೌದು. ನಾನು ಹೇಳಿದ ವಿಭಾಗ ಪತ್ರ ಮುನಿಭೈರಪ್ಪ ಮತ್ತು ಮಕ್ಕಳ ನಡುವೆ ಆಗಿರುವುದು ಎಂದರೆ ಹೌದು. ಸದರಿ ವಿಭಾಗದಲ್ಲಿ ನಾನು ದೊಡ್ಡನಂಜಮ್ಮ ರವರ ಮೊಮ್ಮಗ ಎಂದು ಬರವಣಿಗೆ ಆಗಿರುತ್ತದೆಯೇ ಎಂದರೆ ಸಾಕ್ಷಿ ಸದರಿ ದಾಖಲೆ ಸುಮಾರು 1928 ರಲ್ಲಿ ಬರವಣಿಗೆ ಆಗಿದ್ದು, ಆಗ ನಾನು ಜನಿಸಿರಲಿಲ್ಲ ಎಂದು ನುಡಿಯುತ್ತಾರೆ.

3. ದಾನ ಪತ್ರ ಬರೆಯುವ ಕಾಲಕ್ಕೆ ದೊಡ್ಡನಂಜಮ್ಮ ರವರ ಹೆಸರಿನಲ್ಲಿ ಖಾತೆ ಇತ್ತು. ಖಾತೆದಾರರ ಕಾಲಂ ನಂ.9 ರಲ್ಲಿ ಯಾವತ್ತು ಸಹ ದೊಡ್ಡನಂಜಮ್ಮ ರವರ ಹೆಸರಿನಲ್ಲಿ ಪಹಣಿ ಇರಲಿಲ್ಲ ಎಂದರೆ

ಸಾಕ್ಷಿ ಅವರ ಚಿಕ್ಕಮ್ಮನ ಹೆಸರಿನಲ್ಲಿ ಖಾತೆ ಇತ್ತು, ಸಾಗುವಳಿ ಕಾಲಂ ನಲ್ಲಿ ನನ್ನ ಅಜ್ಜಿ ಹೆಸರು ಇತ್ತು ಎಂದು ನುಡಿಯುತ್ತಾರೆ. ದೊಡ್ಡನಂಜಮ್ಮ ರವರಿಗೆ ದಾನ ಪತ್ರ ಬರೆಯಲು ಯಾವುದೇ ಹಕ್ಕು ಇರಲಿಲ್ಲ ಮತ್ತು ಸಾಗುವಳಿ ಕಾಲಂ ನಲ್ಲಿ ಅವರ ಹೆಸರನ್ನು ನಾವು ಸೇರಿಸಿರುತ್ತೇವೆ ಎಂದರೆ ಸುಳ್ಳು.

4. ಅಸಲು ದಾವಾ ಸಂ.1186/1978 ರಂತೆ ನನ್ನ ತಂದೆ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸುಳ್ಳು. ವಾದಿ ಹಾಜರು ಮಾಡಿರುವ ದಾಖಲೆಗಳನ್ನು ನಾನು ನೋಡಿಲ್ಲ. ದಾನ ಪತ್ರ ವಜಾ ಆಗಿರುವ ಬಗ್ಗೆ ನಾನು ಯಾವುದೇ ನ್ಯಾಯಾಲಯ ಮತ್ತು ಕಂದಾಯ ಇಲಾಖೆಯಲ್ಲಿ ಹೇಳಿಲ್ಲ ಎಂದರೆ ಸುಳ್ಳು. ದಿ.27-02-1981 ರ ತೀರ್ಪಿನಲ್ಲಿ ಸದರಿ ದಾನ ಪತ್ರ ವಜಾ ಆಗಿರುತ್ತದೆ ಎಂದರೆ ಸುಳ್ಳು. ಸದರಿ ದಾವೆಯ ಬಗ್ಗೆ ನನಗೆ ಗೊತ್ತಿದ್ದರೂ ಸಹ ಉದ್ದೇಶ ಪೂರಕವಾಗಿ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸುಳ್ಳು. ಸದರಿ ದಾವೆಯನ್ನು 2 ಎಕರೆಗೆ ಸಲ್ಲಿಸಿದ್ದರು ಎಂದರೆ ಸದರಿ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಅಸಲು ದಾವಾ ಸಂ.110/1997 ನ್ನು ವಾದಿ ಕುಟುಂಬದವರು ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ ವಿಚಾರ ಗೊತ್ತು. ಸದರಿ ದಾವೆಯಲ್ಲಿ ನಾನು ಪಕ್ಷಗಾರನ್ನಾಗಿರಲಿಲ್ಲ ಎಂದರೆ ಹೌದು. ನಾನು ಸದರಿ ದಾವೆಯಲ್ಲಿ ಅರ್ಜಿ ಸಲ್ಲಿಸಿ ಪಕ್ಷಗಾರನಾದೆ ಎಂದು ನುಡಿಯುತ್ತಾರೆ. ಸದರಿ ದಾವೆ ಸಲ್ಲಿಸಿದ ವಿಚಾರವು ಕಂದಾಯ ಅಧಿಕಾರಿಗಳು ಜಮೀನಿನ ಬಳಿ 2001-02 ರಲ್ಲಿ ಬಂದಾಗ ತಿಳಿದು ಬಂದಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.
**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಹೊಸಕೋಟೆ.